ಕರ್ನಾಟಕ ವಿಧಾನಸಭೆ

ಬುಧುವಾರ 26ನೇ ಏಪ್ರಿಲ್ 2000ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ: ಎಂ.ವಿ.ವೆಂಕಟಪ್ಪ) ಅವರು ಪೀಠವನ್ನು ಅಲಂಕರಿಸಿದ್ದರು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ರಾಜ್ಯದಲ್ಲಿ ಜ್ವಲಂತವಾಗಿ ಉರಿಯುತ್ತಿರುವ ರಿಸರ್ವೇಷನ್ ಕುರಿತು.

+ಶ್ರೀ ಡಿ.ವಿ.ಸದಾನಂದಗೌಡ:(ಪುತ್ತೂರು) ಮಾನ್ಯ ಅಧ್ಯಕ್ಷರೇ, ನಾವು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿ ಕೊಟ್ಟಿದ್ದೇವೆ. ರಾಜ್ಯದಲ್ಲಿ ಜ್ವಲಂತವಾಗಿ ಉರಿಯುತ್ತಿರುವ ರಿಸರ್ವೇಷನ್ ಬಗ್ಗೆ. ನಿನ್ನೆ ಮಾನ್ಯ ಸಿಂಧ್ಯಾರವರು ಕೊಟ್ಟಿದ್ದರ ಬಗ್ಗೆ ನಿನ್ನೆ ಅದನ್ನು ನಿಯಮ 69ರಡಿಯಲ್ಲಿ ಅಜೆಂಡಾದಲ್ಲಿ ಸೇರಿಸಲಾಗಿತ್ತು. ಅದು ಇವತ್ತು ಕಾಣಿಸುತ್ತಿಲ್ಲ. ಇವತ್ತು ನಾವು ಆ ಬಗ್ಗೆ ನಿಲುವಳಿ ಸೂಚನೆ ಕೊಟ್ಟಿದ್ದೇವೆ. ಇದು ಇಡೀ ರಾಜ್ಯದ ಮೂಲೆಮೂಲೆಯಲ್ಲಿ ಅತ್ಯಂತ ದೊಡ್ಡ ಜ್ವಲಂತ ಸಮಸ್ಯೆಯಾಗಿ ಮೂಡಿ ಬಂದಿದೆ. ತಕ್ಷಣ ಇದಕ್ಕೆ ಸ್ಪಂದಿಸಬೇಕಾಗಿರುವುದರಿಂದ ಬಾಕಿ ಎಲ್ಲಾ ವಿಚಾರಗಳನ್ನು ಬದಿಗೊತ್ತಿ, ಪ್ರಶ್ನೋತ್ತರ ವೇಳೆಯನ್ನು ಸಹ ಬದಿಗೊತ್ತಿ, ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕು. ಇದಕ್ಕೆ ಏನಾದರೊಂದು ಇತಿಶ್ರೀ ಹಾಡುವಂಥ ವ್ಯವಸ್ಥೆಯನ್ನು ಮಾಡಲೇಬೇಕಾಗುತ್ತದೆ. ಸದನದಲ್ಲಿ ಈ ಬಗ್ಗೆ ಚರ್ಚೆ ಅತೀ ಅವಶ್ಯಕವಾಗಿರುವ ಹಿನ್ನೆಲೆಯಲ್ಲಿ ಬಾಕಿ ಎಲ್ಲ ಕಾರ್ಯಕಲಾಪಗಳನ್ನು ಬದಿಗೊತ್ತಿ ಇದನ್ನು ತೆಗೆದುಕೊಳ್ಳಬೇಕು ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎ.ರಾಮದಾಸ್: ಮಾನ್ಯ ಅಧ್ಯಕ್ಷರೇ, ಅದನ್ನು ಸಮರ್ಥಿಸಿ ಒಂದು ವಿಚಾರವನ್ನು ಹೇಳಲು ಬಯಸುತ್ತೇನೆ. ಇವತ್ತಿನವರೆಗೂ ನಾವು ಕೊಟ್ಟಂಥ ಎಲ್ಲ ಅಡ್ಜರ್ನ್‌ಮೆಂಟ್ ಮೋಷನ್‌ಗಳನ್ನು ತಾವು ಹೇಳಿದ ರೀತಿಯಲ್ಲಿ ನಿಯಮ 69ಕ್ಕೆ ಕನ್‌ವರ್ಟ್ ಮಾಡಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕೆ ಧನ್ಯವಾದಗಳು. ಆದರೆ ಇದು ಬಹಳ ಪ್ರಾಮುಖ್ಯವಾಗಿರುವ ದೃಷ್ಟಿಯಿಂದ ಮತ್ತು ಇದು ಕೇವಲ ಪ್ರತಿಪಕ್ಷದ ವಿಚಾರ ಮಾತ್ರವಾಗಿರದೇ ಆಡಳಿತ ಪಕ್ಷದಲ್ಲಿರುವಂಥ ಸದಸ್ಯರೂ ಕೂಡ ಈ ಬಗ್ಗೆ ಎಷ್ಟೋ ವಿಚಾರಗಳನ್ನು ಹೇಳಬೇಕಾಗಿರುವುದರಿಂದ, ಈ ಬಗ್ಗೆ ಸರ್ಕಾರದಿಂದ ನಮಗೆ ಒಂದು ನಿರ್ಣಯದ ಅವಶ್ಯಕತೆಯಿರುವುದರಿಂದ, ಇದನ್ನು ಯಾವುದೇ ಒಂದು ನಿಯಮದಲ್ಲಿ ಚರ್ಚೆ ಮಾಡಿ ಎನ್ನುವುದಕ್ಕಿಂತ, ಅಡ್ಜರ್ನ್‌ಮೆಂಟ್ ಮೋಷನ್ ಆಗಿ ತೆಗೆದುಕೊಳ್ಳಬೇಕು ಎನ್ನುವ ಒಂದು ಅಪೀಲನ್ನು ತಮ್ಮ ಮುಂದೆ ಇಡುತ್ತಿದ್ದೇನೆ.

ಅಧ್ಯಕ್ಷರು: ಮಾನ್ಯ ಸಿಂಧ್ಯಾರವರು ವಿಷಯ ಹೇಳಿದ್ದಾರೆ. ಅದರ ಬಗ್ಗೆ ನಾನು ನನ್ನ ರೂಲಿಂಗನ್ನು ಕೊಡುತ್ತೇನೆ. ಇದು ನಿನ್ನೆ ನಿಯಮ 69ರಲ್ಲಿ ಅಜೆಂಡಾದಲ್ಲಿತ್ತು. ಇವತ್ತು ಅಜೆಂಡಾದಲ್ಲಿ ಇಲ್ಲ. ಇದಕ್ಕೆ ಕಾರಣವೇನೆಂದರೆ, ಇವತ್ತು ಗ್ರಾಮೀಣಾಭಿವೃದ್ಧಿ ಇಲಾಖಾ ಬೇಡಿಕೆಯ ಮೇಲೆ ಚರ್ಚೆ ಇರುವುದರಿಂದ, ಆ ಚರ್ಚೆಯನ್ನು ಮಾಡುವಾಗ, ಅದರಲ್ಲೇ ಚುನಾವಣೆ ವಿಷಯ ಕೂಡ ಬರುವುದರಿಂದ ಆಗ ಚರ್ಚೆ ಮಾಡಲಿ ಎನ್ನುವ ಒಂದು ಅಂದಾಜಿನ ಮೇಲೆ ಅದನ್ನು ಇವತ್ತಿನ ಅಜೆಂಡಾದಲ್ಲಿ ಸೇರಿಸಿರಲಿಲ್ಲ. ಆದರೆ ವಿರೋದ ಪಕ್ಷದ ನಾಯಕರು ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಿರುವುದರಿಂದ, Since I have already admitted this under Rule-69, now it cannot be discussed under Adjournment Motion. ಅದಕ್ಕೋಸ್ಕರ ಇದನ್ನು ಯಾವ ರೂಪದಲ್ಲಿ ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ನೀವು ಲಂಚ್ ಟೈಂನಲ್ಲಿ ನಮ್ಮ ಕಛೇರಿಗೆ ಬನ್ನಿ. ನಾವು ಮಾತನಾಡೋಣ. We will take up tomorrow or day after tomorrow.

ಶ್ರೀ ಅರಗ ಜ್ಞಾನೇಂದ್ರ: ಇದು ಬಹಳ ಅಗತ್ಯವಾಗಿದೆ.

ಅಧ್ಯಕ್ಷರು: ಸದಾನಂದಗೌಡರೇ, ನೀವು ನಿಮ್ಮ ಸದಸ್ಯರುಗಳಿಗೆ ಹೇಳಿ. ತಾವು ಮಾತನಾಡಿದ ಮೇಲೆ ಅವರು ಏಕೆ ಮಾತನಾಡುತ್ತಾರೆ?

ಶ್ರೀ ಡಿ.ವಿ.ಸದಾನಂದಗೌಡ: ತಾವು ಕೊಟ್ಟ ರೂಲಿಂಗನ್ನು ನಾವು ಒಪ್ಪುತ್ತಿದ್ದೇವೆ. ಏಕೆಂದರೆ ಒಮ್ಮೆ ಅದನ್ನು ನಿಯಮ 69ರಲ್ಲಿ ಆಡ್ಮಿಟ್ ಮಾಡಿದ ಕಾರಣ, ನಿಲುವಳಿ ಸೂಚನೆ ತೆಗೆದುಕೊಳ್ಳಲು ಆಗುವುದಿಲ್ಲವೆಂದು ಹೇಳಿದ್ದೀರಿ. ಈ ವಿಷಯ ನಿನ್ನೆ ಅಜೆಂಡಾದಲ್ಲಿ ಇತ್ತು. ಇವತ್ತು ನಾವು ನಿಲುವಳಿ ಸೂಚನೆ ಕೊಟ್ಟಿರುವ ಕಾರಣವೆಂದರೆ, ಇದನ್ನು ವಿಳಂಬ ಮಾಡುವುದರಿಂದ ಯಾವುದೇ ಪರ್ಪಸ್ ಸರ್ವ್ ಆಗುವುದಿಲ್ಲ. ಇವತ್ತೇ ಚರ್ಚೆಯಾಗಿ ಇವತ್ತೇ ಇದಕ್ಕೆ ಏನಾದರೊಂದು ಇತಿಶ್ರೀಯನ್ನು ಹಾಕಬೇಕು. ನಾಳೆ ಇದನ್ನು ತೆಗೆದುಕೊಂಡರೆ, ನೋಟಿಫಿಕೇಷನ್ ಎಲ್ಲ ಆದಮೇಲೆ, ನಾವು ಆ ಬಗ್ಗೆ ಇಲ್ಲಿ ಚರ್ಚೆ ಮಾಡುವುದರಿಂದ ಯಾವುದೇ ಪರ್ಪಸ್ ಸರ್ವ್ ಆಗುವುದಿಲ್ಲ. ಆದಕಾರಣ ಇವತ್ತೇ ಚರ್ಚೆಯಾಗಬೇಕು ಎನ್ನುವುದು ನನ್ನ ಅಭಿಪ್ರಾಯ. ಆದಕಾರಣ ತಾವು ಇವತ್ತೇ ಸಮಯ ನಿಗದಿ ಮಾಡಿ. ಆ ಸಮಯದಲ್ಲೇ ಮಾತನಾಡುತ್ತೇವೆ.

ಅಧ್ಯಕ್ಷರು: ನೀವು ಲಂಚ್ ಟೈಂನಲ್ಲಿ ನನ್ನ ಕೊಠಡಿಗೆ ಬನ್ನಿ. ನಾವು ಕುಳಿತುಕೊಂಡು ಮಾತನಾಡಿ ಏನು ಮಾಡಬೇಕು ಎಂದು ತೀರ್ಮಾನ ಮಾಡೋಣ. ಗ್ರಾಮೀಣಾಭೀವೃದ್ಧಿ ಇಲಾಖೆ ಬೇಡಿಕೆಯ ಮೇಲೆ ಮಾತನಾಡುವಾಗ ಚುನಾವಣೆಗಳ ವಿಷಯವನ್ನೂ ಮಾತನಾಡಬಹುದು ಎಂದೇ ನಾನು ಅದನ್ನು ಇವತ್ತಿನ ಅಜೆಂಡಾದಿಂದ ತೆಗೆದದ್ದು.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಕೆಟಗರಿಗಳನ್ನು ಹೋಲ್‌ಸೇಲ್ ಆಗಿ ಹಾಕಿದ್ದಾರೆ. ಯಾವುದೇ ಒಂದು ನಿಯಮಾವಳಿ ಇಲ್ಲ. ಬಹಳ ತೊಂದರೆ ಮಾಡಿದ್ದಾರೆ. ಇದು ಇಡೀ ರಾಜ್ಯದ ಜನ ಮಾತನಾಡುವ ಹಾಗೆ ಆಗಿದೆ.

ಅಧ್ಯಕ್ಷರು: ಆಗಲೇ ಹೇಳಿದ್ದೇನಲ್ಲ, We will meet at lunch hour and will take up a decision. Please come.

ಶ್ರೀ ಅರಗ ಜ್ಞಾನೇಂದ್ರ: ಶಾಸಕರನ್ನು ಕೇಳಿ ಮಾಡುತ್ತೇವೆ ಎಂದು ಮುಖ್ಯ ಮಂತ್ರಿಗಳು ಸದನದಲ್ಲಿ ಹೇಳಿದ್ದಾರೆ. ಆದರೆ ಯಾವ ಶಾಸಕರನ್ನೂ ಕೇಳಲಿಲ್ಲ. ಶಾಸಕರು ಎಂದರೆ ಬರಿ ಆಡಳಿತ ಪಕ್ಷದವರೇ? ಆಡಳಿತ ಪಕ್ಷದಲ್ಲೂ ಕೇವಲ ಒಂದು ವರ್ಗದ ಶಾಸಕರನ್ನು ಮಾತ್ರ ಕೇಳಿದ್ದಾರೆ.

ಅಧ್ಯಕ್ಷರು: ಸದಾನಂದಗೌಡರೇ, ನೀವು ಅವರಿಗೆ ಸ್ವಲ್ಪ ಹೇಳಿ.

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೇ, ನಮ್ಮ ಒತ್ತಾಯ ಇಷ್ಟೇ, ಇವತ್ತೇ ಚರ್ಚೆಯಾಗಬೇಕು ಮತ್ತು ಇವತ್ತೇ ಈ ಬಗ್ಗೆ ಯಾವುದಾರೊಂದು ಹೇಳಿಕೆಯನ್ನು ಸರ್ಕಾರ ಈ ಸದನದಲ್ಲಿ ಮಾಡಬೇಕು ಮತ್ತು ಅದಕ್ಕೆ ಪರಿಹಾರ ಕೊಡಬೇಕು.

ಅಧ್ಯಕ್ಷರು: ಆಯಿತು, ಬನ್ನಿ ಮಾತನಾಡೋಣ. ಮ್ಯಾಕ್ಸಿಮಮ್ ಎಂದರೆ ಇನ್ನು ಎರಡು ಗಂಟೆ. ಆನಂತರ ನಾವು ಕುಳಿತು ಮಾತನಾಡೋಣ.

ಶ್ರೀ ಅರಗ ಜ್ಞಾನೇಂದ್ರ: ನೀವು ಇದಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ಆಯಿತು ಬಿಡಿ. ಈಗ ಪ್ರಶ್ನೋತ್ತರ ವೇಳೆ ಪ್ರಶ್ನೋತ್ತರ ವೇಳೆ ಎಷ್ಟಿರಬೇಕು ಎನ್ನುವ ಬಗ್ಗೆ ನಿನ್ನೆಯಿಂದ ನಾವು ಒಂದು ಮಾದರಿಯನ್ನು ಏರ್ಪಾಟು ಮಾಡಿಕೊಂಡಿದ್ದೇವೆ. ಈಗ 11.15, 12.15 ಕ್ಕೆ ಪ್ರಶ್ನೋತ್ತರವನ್ನು ಮುಗಿಸುತ್ತೇನೆ. ಉಳಿದ ಪ್ರಶ್ನೆಗಳನ್ನು ಹೆಲ್ಡ್ ಓವರ್ ಪ್ರಶ್ನೆಗಳೆಂದು ಮಾಡಿ, ಅವುಗಳನ್ನು ಇನ್ನೊಂದು ದಿವಸ ಯಾವರೀತಿ ತೆಗೆದುಕೊಳ್ಳಬೇಕು ಎಂದು ತೀರ್ಮಾನ ಮಾಡೋಣ, ಒಟ್ಟಿನಲ್ಲಿ ಆ ಪ್ರಶ್ನೆಗಳು ಲ್ಯಾಪ್ಸ್ ಆಗುವುದಿಲ್ಲ. ಯಾವಯಾವ ಪ್ರಶ್ನೆಗಳು ಉಳಿಯುತ್ತವೆ ಅವನ್ನು ನಂತರ ತೆಗೆದುಕೊಳ್ಳೋಣ. ನಾನು ನಿನ್ನೆ ಹೇಳಿದ ಪ್ರಕಾರ, ಪ್ರಶ್ನೆ ಕೇಳುವವರೂ ಕೂಡ ಆಯಾಯಾ ಕ್ಷೇತ್ರಕ್ಕೆ ಸಂಬಂಧಪಟ್ಟ ಆಯಾ ಕ್ಷೇತ್ರದ ಬಗ್ಗೆ ಕೇಳಿ. ಜನರಲ್ ನೇಚರ್‌ನಂಥ ಪ್ರಶ್ನೆಗಳು ಕೂಡ ಅಷ್ಟೇ, ಜನರಲ್ ನೇಚರ್ ಇರುವಂಥಾದ್ದನ್ನು ಮೂರು ಜನ ವಿರೋಧ ಪಕ್ಷದ ನಾಯಕರು ಕೇಳಬೇಕು. ಬೇರೆಯವರು ಕೇಳಬೇಡಿ ಎಂದು ನಾನು ಹೇಳುತ್ತಿಲ್ಲ. ಆದರೆ ಅದಕ್ಕೆ ಒಂದು ಮಿತಿ ಇರಬೇಕು. ಇಲ್ಲದಿದ್ದರೆ ಸರಿಯಾಗಿ ಒಂದು ಗಂಟೆಯಾದ ಮೇಲೆ ನಾನು ಪ್ರಶ್ನೋತ್ತರ ವೇಳೆಯನ್ನು ಮುಗಿಸುತ್ತೇನೆ. ಆಗ ಕೊನೆಯಲ್ಲಿರುವ ಪ್ರಶ್ನೆಗಳು ಲ್ಯಾಪ್ಸ್ ಆಗುತ್ತವೆ.

ಶ್ರೀ ಅರಗ ಜ್ಞಾನೇಂದ್ರ: ಒಂದು ಗಂಟೆ ಮಾತ್ರ ಎಂದು ಲಿಮಿಟ್ ಹಾಕಿಕೊಂಡರೆ ಹೆಲ್ಡ್ ಓವರ್ ಆದ ಪ್ರಶ್ನೆಗಳನ್ನು ಯಾವಾಗ ತೆಗೆದುಕೊಳ್ಳುತ್ತೀರೆಂದು ಹೇಳಬೇಕು. ಏಕೆಂದರೆ ಸರ್ಕಾರದವರು ಸಮಯಕ್ಕೆ ಸರಿಯಾಗಿ ಉತ್ತರ ಕೊಡುವುದಿಲ್ಲ. ಆಗ ತಾವು ಅದನ್ನು ಹೆಲ್ಡ್ ಓವರ್ ಮಾಡಿಕೊಂಡು ಬೇರೆಬೇರೆ ಸಮಯದಲ್ಲಿ ತೆಗೆದುಕೊಳ್ಳುತ್ತೇನೆ ಎಂದು ಆಶ್ವಾಸನೆ ಕೊಡುತ್ತೀರಿ.

ಅಧ್ಯಕ್ಷರು: ನಾನು ಹೇಳುವುದನ್ನು ಕೇಳಿ. ಉಳಿದ ಪ್ರಶ್ನೆಗಳು ಲ್ಯಾಪ್ಸ್ ಆಗುವುದಿಲ್ಲ. ಅದನ್ನು ಯಾವರೀತಿ ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ನಾವು ಇವತ್ತು ಮಧ್ಯಾಹ್ನ ಲಂಚ್ ವೇಳೆಯಲ್ಲಿ ಡಿಸೈಡ್ ಮಾಡುತ್ತೇವೆ. ಈಗ ಪ್ರಶ್ನೋತ್ತರ ವೇಳೆ. ಈಗ ಸಮಯ 11 ಗಂಟೆ 17 ನಿಮಿಷ. 12 ಗಂಟೆ 17 ನಿಮಿಷಕ್ಕೆ ಮುಗಿಸುತ್ತೇನೆ.

2. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ವಿಷಯ: ಹುಣಸೂರು ಸಾರ್ವಜನಿಕ ಆಸ್ಪತ್ರೆ ವಿಸ್ತರಣೆ ಕಾರ್ಯ.

301(2960)

ಶ್ರೀ ಪಾಪಣ್ಣ ವಿ. (ಹುಣಸೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಣಸೂರು ಜನರಲ್ ಆಸ್ಪತ್ರೆಯ ವಿಸ್ತರಣೆ ಕಾಮಗಾರಿ ನಿಧಾನಗತಿ ಆಗಲು ಕಾರಣವೇನು?

ಆ) ಈಗಾಗಲೇ ಲಕ್ಷಾಂತರ ರೂಪಾಯಿಗಳ ಉಪಕರಣಗಳು ಒಂದು ವರ್ಷವಾದರೂ ಕಟ್ಟಡದ ಕೆಲಸ ಮುಗಿಯದೆ ಉಪಕರಣಗಳನ್ನು ಹಾಗೆಯೇ ಇಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಆಸ್ಪತ್ರೆಯ ವಿಸ್ತರಣೆ ನವೀಕರಣ ಎಂದು ಪೂರ್ಣಗೊಳಿಸಲಾಗುವುದು?

ಎ.ಬಿ. ಮಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಒಪ್ಪಂದದ ಮೇರೆಗೆ ಗುತ್ತಿಗೆದಾರರು ಜುಲೈ 1999ರಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕಿತ್ತು. ವಿಳಂಬಕ್ಕಾಗಿ ಗುತ್ತಿಗೆದಾರರಿಗೆ ನೋಟಿಸ್ ಜಾರಿ ಮಾಡಲಾಗಿದೆ. ಈಗ ಕಟ್ಟಡ ಕಾಮಗಾರಿ ಪೂರ್ಣಗೊಂಡಿದ್ದು ಕರ್ನಾಟಕ ವಿದ್ಯುತ್